I/309259/2022

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

---

ಸಂಖ್ಯೆ: 872970 DPUE-SPR10Misc(Misc)/8/2022-SPORTS

ದಿನಾಂಕ: 06-09-2022

# ಜ್ಞಾಪನ

ವಿಷಯ: 2022-23 ನೇ ಸಾಲಿನ ರಾಷ್ಟ್ರಮಟ್ಟದ ಕ್ರೀಡೆಗಳನ್ನು ನಡೆಸಲು ಪ್ರಸ್ತಾವನೆ ಸಲ್ಲಿಸುವ ಬಗ್ಗೆ.

ಉಲ್ಲೇಖ: SGFI/ 2268 / 2022-23, ದಿನಾಂಕ : 31-08-2022

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ, 2022-23 ನೇ ಸಾಲಿನಲ್ಲಿ ಎಸ್.ಜಿ.ಎಫ್.ಐ ವತಿಯಿಂದ ನಡೆಯಲಿರುವ ರಾಷ್ಟ್ರ ಮಟ್ಟದ 19 ವರ್ಷ ವಯೋಮಾನದ ಒಳಗಿನ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳ ಕ್ರೀಡಾಕೂಟ ಆಯೋಜಿಸಲು ಆಸಕ್ತಿ ಹೊಂದಿರುವ ಪದವಿ ಪೂರ್ವ ಕಾಲೇಜುಗಳಿಂದ ಜಿಲ್ಲಾ ಉಪನಿರ್ದೇಶಕರುಗಳು ಪ್ರಸ್ತಾವನೆ ಪಡೆದು, ಈ ಕೆಳಕಂಡ ಷರತ್ತುಗಳನ್ನು ಪೂರೈಸುವುದರ ಬಗ್ಗೆ ಧೃಡೀಕರಿಸಿಕೊಂಡು, ದಿನಾಂಕ: 15-09-2022 ರ ಒಳಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಿದೆ.

ಷರತ್ತುಗಳು:

1.ಕ್ರೀಡಾಕೂಟ ಆಯೋಜಿಸುವ ಸ್ಥಳ / ಸಮೀಪ, ಬೆಂಗಳೂರು ಸೇರಿದಂತೆ ವಿವಿಧ ರಾಜ್ಯಗಳಿಂದ ರೈಲ್ವೆ ಸಂಪರ್ಕ ಹೊಂದಿರಬೇಕು.
2. ಕೋರಿರುವ ಪಂದ್ಯಾವಳಿಯನ್ನು ನಡೆಸಲು ಅಗತ್ಯ ಮೂಲಭೂತ ಸೌಕರ್ಯ ಹೊಂದಿರುವ, ಅಗತ್ಯವಿದ್ದಲ್ಲಿ ಹೊನಲು ಬೆಳಕಿನ ವ್ಯವಸ್ಥೆ ಇರುವ ಉನ್ನತ ಮಟ್ಟದ ಕ್ರೀಡಾಂಗಣ ಹೊಂದಿರಬೇಕು.
3. ವಿವಿಧ ರಾಜ್ಯಗಳಿಂದ ಬರುವ ಅಂದಾಜು 1,000 ಕ್ರೀಡಾಪಟುಗಳು, ಕೋಚ್ ಹಾಗೂ ವ್ಯವಸ್ಥಾಪಕರುಗಳಿಗೆ ಉತ್ತಮ ವಸತಿ ಸೌಕರ್ಯ ಕಲ್ಪಿಸಬೇಕು.
4. ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ವಸತಿ ಸೌಕರ್ಯ ಕಲ್ಪಿಸಬೇಕು ಮತ್ತು ಹಾಸಿಗೆ ಹೊದಿಕೆಗಳನ್ನು ಸಹ ವ್ಯವಸ್ಥೆ ಮಾಡಬೇಕು. ಬಾಲಕಿಯರ ವಸತಿ ನಿಲಯಕ್ಕೆ ಮಹಿಳಾ ಆರಕ್ಷಕರಿಂದ ಭದ್ರತೆ ಒದಗಿಸಬೇಕು.
5. ವಸತಿ ನಿಲಯಗಳು ಸ್ವಚ್ಛ ಹಾಗೂ ಉತ್ತಮ ಶೌಚಾಲಯ ಹೊಂದಿರಬೇಕು.
6. ಕ್ರೀಡಾಪಟುಗಳು, ಕೋಚ್ ಹಾಗೂ ವ್ಯವಸ್ಥಾಪಕರುಗಳಿಗೆ ಉತ್ತಮ ಊಟ ಹಾಗೂ ಉಪಹಾರದ ವ್ಯವಸ್ಥೆ ಒದಗಿಸಬೇಕು ಮತ್ತು ಕ್ರೀಡಾಂಗಣ ಹಾಗೂ ವಸತಿ ನಿಲಯಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಊಟ ಮತ್ತು ಉಪಹಾರದ ವ್ಯವಸ್ಥೆಗಾಗಿ ದಿನವೊಂದಕ್ಕೆ ಪ್ರತಿ ಕ್ರೀಡಾಪಟುವಿನಿಂದ ತಲಾ ರೂ. 200/- ಗಳನ್ನು ಪಡೆಯಲು ಅವಕಾಶ ಇರುತ್ತದೆ.
7. ಎಸ್.ಜಿ.ಎಫ್.ಐ ನಿಂದ ಬರುವ ಅಧಿಕಾರಿಗಳಿಗೆ ಮತ್ತು ಇಲಾಖೆಯಿಂದ ಬರುವ ಅಧಿಕಾರಿಗಳಿಗೆ ಪ್ರತ್ಯೇಕ ಉತ್ತಮ ಗುಣಮಟ್ಟದ ಕೊಠಡಿಗಳನ್ನು ಹಾಗೂ ಶೌಚಾಲಯ ವ್ಯವಸ್ಥೆ ನೀಡಬೇಕು.
8. ಕ್ರೀಡಾಪಟುಗಳು, ಕೋಚ್, ವ್ಯವಸ್ಥಾಪಕರುಗಳು ಹಾಗೂ ಅಧಿಕಾರಿಗಳಿಗೆ ಉಚಿತ ವೈದ್ಯಕೀಯವ್ಯವಸ್ಥೆ ಮತ್ತು ಕ್ರೀಡಾಂಗಣದಲ್ಲಿ ನುರಿತ ವೈದ್ಯರ ಸೇವೆ ಹಾಗೂ ತುರ್ತು ಚಿಕಿತ್ಸೆ ವ್ಯವಸ್ಥೆ ಮಾಡಬೇಕಾಗಿರುತ್ತದೆ.
9. ಕ್ರೀಡಾ ತಂಡಗಳಿಗೆ ರೈಲ್ವೇ ನಿಲ್ದಾಣದಿಂದ ತಂಗುವ ಸ್ಥಳ ಹಾಗೂ ಈ ಸ್ಥಳದಿಂದ ಕ್ರೀಡಾಂಗಣಕ್ಕೆ ಉಚಿತ ಸಾರಿಗೆ ವ್ಯವಸ್ಥೆ ಮಾಡಬೇಕಾಗಿರುತ್ತದೆ.
10. ಕ್ರೀಡಾ ತಂಡಗಳ ಕ್ಷೇಮದ ಸಂಪೂರ್ಣ ಜವಾಬ್ದಾರಿ ಆಯೋಜಕರದ್ದಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ವಹಿಸಬೇಕು ಮತ್ತು ಕ್ರೀಡಾಕೂಟದ ಸಮಯದಲ್ಲಿ ಸ್ಥಳೀಯ ಆರಕ್ಷಕ ಠಾಣೆಯಿಂದ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು.
11. ಎಸ್.ಜಿ.ಎಫ್.ಐ ವತಿಯಿಂದ ಬರುವ ಅಧಿಕಾರಿಗಳಿಗೆ ಮತ್ತು ವೀಕ್ಷಕರಿಗೆ ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಗಳನ್ನು ಆಯೋಜಕರೇ ನೀಡಬೇಕು.
12. ಕ್ರೀಡಾಕೂಟ ಆಯೋಜಿಸಲು ಇಲಾಖೆ ವತಿಯಿಂದಾಗಲಿ ಅಥವಾ ಎಸ್.ಜಿ.ಎಫ್.ಐ ವತಿಯಿಂದಾಗಲಿ

I/309259/2022

ಯಾವುದೇ ಅನುದಾನ ನೀಡಲಾಗುವುದಿಲ್ಲ. ಸಂಪೂರ್ಣ ವೆಚ್ಚವನ್ನು ಆಯೋಜಕರೇ ಭರಿಸಬೇಕಾಗಿರುತ್ತದೆ.
13. ಕ್ರೀಡಾಕೂಟ ಆಯೋಜಿಸುವ ವಿದ್ಯಾಸಂಸ್ಥೆಯು ಸಂಬಂಧಿಸಿದ ಜಿಲ್ಲಾಡಳಿತ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ಉಪನಿರ್ದೇಶಕರ ಅನುಮತಿ, ಮಾರ್ಗದರ್ಶನ ಮತ್ತು ಸಹಯೋಗದಲ್ಲಿ ಕ್ರೀಡಾಕೂಟ ಆಯೋಜಿಸಬೇಕು.
14. ಕ್ರೀಡಾಕೂಟದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಆಯೋಜಕರು ಹಾಗೂ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಕ್ರಮ ವಹಿಸುವುದು. ತಪ್ಪಿದಲ್ಲಿ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

**Signed by Ramachandran R**
**Date: 07-09-2022 11:05:05**

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ, ಅಗತ್ಯ ಕ್ರಮಕ್ಕಾಗಿ.
2. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ, ಮಾಹಿತಿಗಾಗಿ.
3. ಜಂಟಿ ನಿರ್ದೇಶಕರು ಆಡಳಿತ / ಶೈಕ್ಷಣಿಕ, ಮಾಹಿತಿಗಾಗಿ.
4. ಇ-ಆಡಳಿತ ಶಾಖೆ, ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲು
5. ಕಛೇರಿ ಪ್ರತಿ